ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 9–8–2017

# ಪತ್ರಿಕಾ ಆಮಂತ್ರಣ

1. ಜಂಟಿ ಪತ್ರಿಕಾಗೋಷ್ಠಿ:

ಕೃಷ್ಣಬೈರೇಗೌಡ, ಕೃಷಿ ಸಚಿವರು ಹಾಗೂ
ಟಿ.ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ದಿನಾಂಕ: 10–08–2017 ಗುರುವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ: 123, ವಿಕಾಸ ಸೌಧ, ಮೊದಲನೆ ಮಹಡಿ, ಬೆಂಗಳೂರು

2. ಪತ್ರಿಕಾಗೋಷ್ಠಿ:
ಅಧ್ಯಕ್ಷರು ಹಾಗೂ ರಿಜಿಸ್ಟ್ರಾರ್ ಕರ್ನಾಟಕ ಲಲಿತಕಲಾ ಅಕಾಡೆಮಿ

ದಿನಾಂಕ: 10–8–2017 ಗುರುವಾರ ಸಮಯ: 1.00 ಗಂಟೆಗೆ
ಸ್ಥಳ: ಕರ್ನಾಟಕ ಲಲಿತಕಲಾ ಅಕಾಡೆಮಿ, 2 ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು –560 002.

ವಿ.ಸೂ. ಮಧ್ಯಾಹ್ನ 1.00 ಗಂಟೆಗೆ ವಿಶೇಷ ಔತಣ ಕೂಟ ಏರ್ಪಡಿಸಲಾಗಿದೆ.

3. ಪತ್ರಿಕಾಗೋಷ್ಠಿ:

ಮರಿತಿಬ್ಬೇಗೌಡ,
ಉಪ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 10–08–2017 ಗುರುವಾರ, ಮಧ್ಯಾಹ್ನ 1–30 ಗಂಟೆಗೆ
ಸ್ಥಳ: ಶಾಸಕರ ಭವನ–2, ಸಮ್ಮೇಳನ ಸಭಾಂಗಣ, ಬೆಂಗಳೂರು

4. ಅ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡ ಭಾಷೆಯ ಬಳಕೆಯ ಬಗ್ಗೆ ಪರಿಶೀಲನೆ
ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ದಿನಾಂಕ: 10-8-2017 ಗುರುವಾರ ಸಮಯ: ಬೆಳಿಗ್ಗೆ 11-00 ಗಂಟೆಗೆ
ಸ್ಥಳ: ಉಪ ಕುಲಪತಿಗಳ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಗಾಂಧಿಕೃಷಿ ವಿಜ್ಞಾನ ಕೇಂದ್ರ
ಹೆಬ್ಬಾಳ, ಬೆಂಗಳೂರು

ಆ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡ ಭಾಷೆಯ ಬಳಕೆಯ ಬಗ್ಗೆ ಪರಿಶೀಲನೆ:
ದಿನಾಂಕ: 10-8-2017 ಸಮಯ ಮಧ್ಯಾಹ್ನ 3-00 ಗಂಟೆಗೆ
ಸ್ಥಳ: ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಛೇರಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಗೇಟ್,
ನಂ.2, 7 ನೆ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು

## ಪತ್ರಿಕಾ ಪ್ರಕಟಣೆ

42/42

## ಸಾರಿಗೆ ಸಚಿವರ ಪ್ರವಾಸ

ಬೆಂಗಳೂರು, ಆಗಸ್ಟ್ 9 (ಕರ್ನಾಟಕ ವಾರ್ತೆ)

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಆಗಸ್ಟ್ 10 ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಪ್ರಕಟಣೆ ತಿಳಿಸಿದೆ.

43/43

## ಫಲಿತಾಂಶ

ಬೆಂಗಳೂರು, ಆಗಸ್ಟ್ 9 (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಮೇ -2017 ರಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಫಲಿತಾಂಶವನ್ನು ದಿನಾಂಕ 11-8-2017 ರ ಬೆಳಿಗ್ಗೆ 10.00 ಗಂಟೆಗೆ ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸಲಾಗುವುದು.

ಫಲಿತಾಂಶವನ್ನು ಮಂಡಳಿಯ ವೆಬ್‌ಸೈಟ್www.kseeb.kar.nic.in ನಲ್ಲಿ ದಿನಾಂಕ 10-8-2017 ರ ಮಧ್ಯಾಹ್ನ 3-00 ಗಂಟೆಯನಂತರ ವೀಕ್ಷಿಸಬಹುದು. ಉತ್ತರ ಪತ್ರಿಕೆ ಮತ್ತು ಛಾಯಾಪ್ರತಿ ಮತ್ತು ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಲು 21-8-2017 ಕೊನೆಯ ದಿನವಾಗಿರುತ್ತದೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

## ಓಮ್ನಿಕ್ಯುರಿಸ್ ಹೆಲ್ತ್‌ಕೇರ್ ಸಂಸ್ಥೆ ಜೊತೆ ಕರ್ನಾಟಕ ಸರ್ಕಾರದ ಒಡಂಬಡಿಕೆ

**ಬೆಂಗಳೂರು, ಆಗಸ್ಟ್ 9 (ಕರ್ನಾಟಕ ವಾರ್ತೆ)**

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿರುವ ಡಿಜಿಟಲ್ ತಂತ್ರಜ್ಞಾನವುಳ್ಳ ಮುಂದುವರೆದ ವೈದ್ಯಕೀಯ ಶಿಕ್ಷಣದಂತೆಯೇ ರಾಜ್ಯದ ವೈದ್ಯರುಗಳಿಗೆ ಕಲ್ಪಿಸುವ ನಿಟ್ಟಿನಲ್ಲಿ ಓಮ್ನಿಕ್ಯುರಿಸ್ ಹೆಲ್ತ್‌ಕೇರ್ ಸಂಸ್ಥೆಯವರೊಂದಿಗೆ ಕರ್ನಾಟಕ ಸರ್ಕಾರವು ದಿನಾಂಕ: 07.08.2017ರಂದು ಒಡಂಬಡಿಕೆ ಮಾಡಿಕೊಂಡಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಕೆ.ಆರ್.ರಮೇಶ್ ಕುಮಾರ್ ಅವರು ತಿಳಿಸಿದ್ದಾರೆ.

ಓಮ್ನಿಕ್ಯುರಿಸ್ ಹೆಲ್ತ್‌ಕೇರ್ ಸಂಸ್ಥೆಯು ಭಾರತದ ಹೆಸರಾಂತ ವೈದ್ಯಕೀಯ ಸಂಸ್ಥೆಗಳಾದ ಟಾಟಾ ಮೆಮೋರಿಯಲ್ ಕೇಂದ್ರ, ಜಯದೇವ ಹೃದ್ರೋಗ ಸಂಸ್ಥೆ, ಭಾರತದ ವೈದ್ಯಕೀಯ ಸಂಘ (ಎ.ಪಿ.ಐ), ಭಾರತೀಯ ದಂತ ಸಂಘ (ಐ.ಡಿ.ಎ), ಏಷಿಯನ್ ರಿಸರ್ಚ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಫಾರ್ ಸ್ಕಿಲ್ ಟ್ರಾನ್ಸ್‌ಫರ್ ಹಾಗೂ ಇನ್ನಿತರ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸುಮಾರು ೯೦೦ ತಜ್ಞ ವೈದ್ಯರುಗಳ ಕೊರತೆಯಿರುವುದರಿಂದ, ಕೆಲವು ತಜ್ಞವೈದ್ಯಕೀಯ ಸೇವೆಯು ಸರ್ಕಾರದ ವಿವಿಧ ಹಂತದ ಆಸ್ಪತ್ರೆಗಳಲ್ಲಿ ಲಭ್ಯವಾಗುತ್ತಿರುವುದಿಲ್ಲ. ಹಾಲಿ ೩೫೦ ತಜ್ಞ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾರಂಭವಾಗಿರುವ ಸ್ನಾತಕೋತ್ತರ ಡಿ.ಎನ್.ಬಿ. ವ್ಯಾಸಂಗದ ೪೮ ವಿವಿಧ ಕೋರ್ಸ್‌ಗಳಿಗೆ ೯೮ ಸೀಟುಗಳನ್ನು ಸೇವಾ ನಿರತ ವೈದ್ಯರಿಗೆ ನಿಗದಿಪಡಿಸಲು ಇಲಾಖೆಯು ಪ್ರಸ್ತಾಪಿಸಿದೆ.

ತತ್ಸಂಬಂಧ ನಮ್ಮ ವೈದ್ಯರಿಗೆ ಜ್ಞಾನಾಭಿವೃದ್ಧಿ ಹಾಗೂ ಕೌಶಲ್ಯವನ್ನು ವೃದ್ಧಿಸುವ ಸಲುವಾಗಿ ಅವರು ಸ್ವಯಂ ಪ್ರೇರಿತವಾಗಿ ತಮ್ಮ ಅನುಕೂಲದಂತೆ ಓಮ್ನಿಕ್ಯುರಿಸ್ ಸಂಸ್ಥೆಯು ನೀಡುತ್ತಿರುವ ಆನ್‌ಲೈನ್ ಮುಂದುವರೆದ ವೈದ್ಯಕೀಯ ಶಿಕ್ಷಣ ಸೌಲಭ್ಯವನ್ನು ಒದಗಿಸಲಾಗಿದೆ. ಇದರಲ್ಲಿ ವಿವಿಧ ವೈದ್ಯಕೀಯ ತಜ್ಞತೆಗಳಾದ ಹೃದ್ರೋಗ, ಮಧುಮೇಹ, ಕ್ಯಾನ್ಸರ್, ತಾಯಿ ಆರೋಗ್ಯ, ವೃದ್ಧಾರೋಗ್ಯ ಶಾಸ್ತ್ರ, ತುರ್ತು ಚಿಕಿತ್ಸೆ ಹಾಗೂ ಇತರೆ ತಜ್ಞತೆಯ ವಿಷಯಗಳು ಇರುತ್ತದೆ.

೫ನೇ ಆಗಸ್ಟ್ ೨೦೧೭ ರಂದು ನಾರಾಯಣ ಹೃದಯಾಲಯದಲ್ಲಿ ಐ.ಸಿ.ಯು ಮತ್ತು ತುರ್ತು ಚಿಕಿತ್ಸೆ ತರಬೇತಿಯನ್ನು ಹೊಂದುತ್ತಿರುವ ಕೆಲವು ಇಲಾಖೆಯ ವೈದ್ಯರಿಗೆ ಪ್ರಾಯೋಗಿಕ ತರಬೇತಿಯನ್ನು ಹಮ್ಮಿಕೊಂಡಿದ್ದು, ಸದರಿ ವೈದ್ಯರು ಡಿಜಿಟಲ್ ತಂತ್ರಜ್ಞಾನವುಳ್ಳ ಮುಂದುವರೆದ ವೈದ್ಯಕೀಯ ಶಿಕ್ಷಣವು ತಮ್ಮ ಅನುಕೂಲದಂತೆ ತರಬೇತಿಯನ್ನು ಹೊಂದುವ ಅವಕಾಶವನ್ನು ನೀಡುತ್ತಿರುವುದರಿಂದ ಈ ಶಿಕ್ಷಣವನ್ನು ಸ್ವಾಗತಿಸಿರುತ್ತಾರೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**45/45**

## PRESS NOTE ON DIGITAL CONTINUOUS MEDICAL EDUCATION PLATFORM BY GOVERNMENT OF KARNATAKA

**Bangalore, August 9 (Karnataka Information)**

**The Government of Karnataka has entered in to an MoU on 7th August 2017 with Omnicuris Healthcare, a social digital venture for providing online Continuous Medical Education (CME) for physicians in partnership with reputed Medical Institutes and Medical Associations such as Tata Memorial Center, Jayadeva Institute of Cardiology, Bangalore Medical College, *Federation of Obstetric and Gynecological Societies of India (FOGSI),* Association of Physicians of India (API), Indian Dental Association (IDA), Asian Research and Training Institute for Skill Transfer (ARTIST) etc. Digital continuous medical education has been available in western countries for decades and is coming up in India.**

**Health and Family Welfare Department has an acute shortage of 900 specialists, due to which some of the specialists services are not being given in the Government hospitals at different levels. Now 350 doctors have been taken on contract basis. Department has also proposed for about 98 specialists seats in 48 courses through DNB in district hospitals for giving post graduation to in service candidates.**

**In the meanwhile, it is proposed to expose our physicians to Omnicuris platform for their knowledge enhancements and skill building requirements that can be taken at their convenience on a voluntary basis. Various medical modules across multiple specialties such as cardio, diabetes, Oncology, maternal health, Geriatrics, Emergency medicine, etc will be available.**

**A pilot was carried out on 5th August with few departmental doctors while attending training on ICU and emergency medicine at Narayan Hrudayalaya, they welcome this initiative as there is a great need for a digital platform that would enable them to learn and get trained at their convenience.**

**46/46**

# ಭರ್ತಿಯಾಗಲಿವೆ ಕಾವೇರಿ ಕಣಿವೆಯ ಕೆರೆ-ಕಟ್ಟೆಗಳು

**ಬೆಂಗಳೂರು, ಆಗಸ್ಟ್ 9 (ಕರ್ನಾಟಕ ವಾರ್ತೆ)**

ಕುಡಿಯುವ ನೀರಿಗಾಗಿ ಮತ್ತು ಅಂತರ್ಜಲ ಮಟ್ಟ ಹೆಚ್ಚಿಸಲು ಕಾವೇರಿ ಕಣಿವೆಯ ಕೆರೆ, ಕಟ್ಟೆಗಳನ್ನು ತುಂಬಿಸಲಾಗುವುದು. ಇದಕ್ಕಾಗಿ ನಾಲ್ಕು ಜಲಾಶಯಗಳಿಂದ ನಾಳೆಯಿಂದಲೇ (ಆಗಸ್ಟ್

10) ನೀರು ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ.

ಕಾವೇರಿ ನದಿ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕರೆದಿದ್ದ ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು, ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳ ಸಭೆ ಬಳಿಕ ಗೃಹ ಕಚೇರಿ ಕೃಷ್ಣಾದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಯವರು ಈ ವಿಷಯ ತಿಳಿಸಿದರು.

ಕುಡಿಯುವ ನೀರಿಗೆ ಮತ್ತು ಅಂತರ್ಜಲ ಮಟ್ಟ ಹೆಚ್ಚಿಸಲು ಕೆರೆ, ಕಟ್ಟೆಗಳನ್ನು ತುಂಬಿಸಲಾಗುತ್ತಿದೆ. ಆದ್ದರಿಂದ ಭತ್ತ ನಾಟಿ ಮಾಡಲು ಮುಂದಾಗಬೇಡಿ ಎಂದು ಮುಖ್ಯಮಂತ್ರಿಯವರು ರೈತರಲ್ಲಿ ಕಳಕಳಿಯ ಮನವಿ ಮಾಡಿದ್ದಾರೆ.

ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿದೆ. ಇದರಿಂದ ಜನ, ಜಾನುವಾರುಗಳಿಗೆ ತೊಂದರೆಯಾಗಿದೆ. ಹೀಗಾಗಿ ನೀರು ಬಿಡುಗಡೆ ಮಾಡಿ ಕೆರೆ, ಕಟ್ಟೆಗಳನ್ನು ತುಂಬಿಸುವಂತೆ ಒತ್ತಾಯಿಸಿ ಕೃಷ್ಣರಾಜ ಸಾಗರ, ಕಬಿನಿ, ಹೇಮಾವತಿ, ಹಾರಂಗಿ ಅಚ್ಚುಕಟ್ಟು ಪ್ರದೇಶದ ರೈತರು ಹೋರಾಟ ಮಾಡುತ್ತಿದ್ದಾರೆ.

ಅಂತರ್ಜಲ ಬತ್ತಿದ್ದು, ಸಾವಿರ ಅಡಿಗಳವರೆಗೆ ಕೊರೆದರೂ ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿಲ್ಲ ಎಂದು ರೈತರು ಹೇಳುತ್ತಿದ್ದಾರೆ. ರೈತರಿಗೆ ನೀರು ಕೊಡಬಾರದು ಎಂಬುದು ಸರ್ಕಾರದ ಉದ್ದೇಶವಲ್ಲ. ರೈತರ ರಕ್ಷಣೆ ನಮ್ಮ ಆದ್ಯತೆ. ಆದ್ದರಿಂದಲೇ ನೀರು ಬಿಡುಗಡೆ ಮಾಡುವ ನಿರ್ಧಾರ ಕೈಗೊಂಡಿದ್ದೇವೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ಈ ವರ್ಷದ ಮುಂಗಾರಿನಲ್ಲಿ ಮಳೆ ಕೊರತೆ ತೀವ್ರವಾಗಿದೆ. ಈ ಪ್ರಮಾಣದ ಕೊರತೆಯನ್ನು ಕಳೆದ 46 ವರ್ಷಗಳಲ್ಲಿ ಕಂಡಿರಲಿಲ್ಲ. ರಾಜ್ಯದಲ್ಲಿ ಕಳೆದ ವರ್ಷವೂ ಬರಗಾಲ ತೀವ್ರವಾಗಿತ್ತು. ಆದರೂ ಮಳೆ ಕೊರತೆ ಇಷ್ಟು ಕಾಡಿರಲಿಲ್ಲ. ಕಳೆದ ವರ್ಷ ಇದೇ ದಿನ ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳಲ್ಲಿ 53.52 ಟಿಎಂಸಿ ನೀರು ಇತ್ತು. ಈ ವರ್ಷ 45 ಟಿಎಂಸಿ ಇದೆ. ಒಳ ಹರಿವು ಸಹ ಕಳೆದ ವರ್ಷಕ್ಕಿಂತ ಕಡಿಮೆ ಇದೆ. ಜೊತೆಗೆ ಅಚ್ಚುಕಟ್ಟು ಪ್ರದೇಶದಲ್ಲೂ ಮಳೆಯಾಗುತ್ತಿಲ್ಲ. ಹೀಗಾಗಿ ಜಲಾಶಯಗಳ ಕೆಳ ಭಾಗದ ಪ್ರದೇಶಗಳಲ್ಲೂ ನೀರಿಲ್ಲದಂತೆ ಆಗಿದೆ. ಇದರಿಂದಾಗಿ ರೈತರ ಬೇಡಿಕೆ ಈಡೇರಿಸಲು ಸ್ವಲ್ಪ ಮೀನಾಮೇಷ ಎಣಿಸುವಂತಾಗಿತ್ತು. ಜಲಾಶಯಗಳಿಂದ ನೀರು ಬಿಟ್ಟ ಕೂಡಲೇ ರೈತರು ಭತ್ತ ನಾಟಿ ಮಾಡುತ್ತಾರೆ. ನಾಟಿ ಮಾಡಿದ ಬಳಿಕ ನೀರಿಗೆ ಕೊರತೆ ಎದುರಾದರೆ ನಷ್ಟ ಅನುಭವಿಸುತ್ತಾರೆ ಎಂಬುದು ಸರ್ಕಾರದ ಲೆಕ್ಕಾಚಾರ ಆಗಿತ್ತು. ಕಳೆದ ಬಾರಿ ರೈತರಿಗೆ ಈ ಅನುಭವ ಆಗಿದೆ. ಇದಲ್ಲದೆ, ಭತ್ತ ಬೆಳೆಯುವ ಪ್ರದೇಶ 2.68 ಲಕ್ಷ ಎಕರೆಯಷ್ಟಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಆಲೋಚನೆಗಿಳಿದಿತ್ತು ಎಂದು ಸಿಎಂ ತಿಳಿಸಿದರು.

ಆದರೆ ಈಗ ಜನ, ಜಾನುವಾರುಗಳು ಕುಡಿಯುವ ನೀರಿಗೆ ಪರದಾಡುತ್ತಿರುವುದರಿಂದ ಕಬಿನಿ, ಹಾರಂಗಿ, ಕೆಆರ್‌ಎಸ್, ಹೇಮಾವತಿ ಜಲಾಶಯದಿಂದ ನೀರು ಬಿಡುಗಡೆ ಮಾಡಿ ಕೆರೆ, ಕಟ್ಟೆಗಳನ್ನು ತುಂಬಿಸಲು ಇಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಭತ್ತಕ್ಕೆ ಬದಲಾಗಿ ಮಳೆ ಆಧಾರಿತ ಕೃಷಿಗೆ ಮುಂದಾಗುವಂತೆ ರೈತರಲ್ಲಿ ನಾನು ಕಳಕಳಿಯ ಮನವಿ ಮಾಡುತ್ತೇನೆ. ಈ ಸಂಬಂಧ ಕೃಷಿ ಇಲಾಖೆ ಕರಪತ್ರಗಳನ್ನು ಮುದ್ರಿಸಿ ಮನೆ ಮನೆಗೆ ಹಂಚಲಿದೆ ಎಂದು ಸಿಎಂ ಹೇಳಿದರು.

ಯಾವುದೇ ಬೆಳೆ ಬೆಳೆಯಬೇಡಿ ಎಂದು ಹೇಳುತ್ತಿಲ್ಲ. ಕೊಡಲು ನೀರಿಲ್ಲದ ಕಾರಣ ಮತ್ತು ತೊಂದರೆಗೆ ಸಿಲುಕುವ ಸಾಧ್ಯತೆ ಇರುವುದಿರಂದ ಭತ್ತ ಮಾತ್ರ ಬೆಳೆಯಬೇಡಿ ಎಂದು ಮನವಿ ಮಾಡುತ್ತಿದ್ದೇವೆ. ರೈತರು ಸರ್ಕಾರದ ಜೊತೆ ಸಹಕರಿಸಬೇಕು. ನಾವೂ ರೈತರ ಪರ ಇದ್ದೇವೆ. ಮುಂದೆ ಮಳೆ ಆದರೆ ನೀರು ಕೊಡುತ್ತೇವೆ ಎಂದು ತಿಳಿಸಿದರು.

ಮುಂದಿನ ವಾರ ಮೋಡ ಬಿತ್ತನೆ ಸಹ ಮಾಡುತ್ತೇವೆ. ತಮಿಳುನಾಡಿಗೆ ಬಿಡುಗಡೆ ಮಾಡಬೇಕಾದ ನೀರಿನಲ್ಲಿ ಎಷ್ಟು ಕಡಿತ ಆಗಬೇಕೋ ಅಷ್ಟು ಆಗಿದೆ ಎಂದು ಮುಖ್ಯಮಂತ್ರಿಯವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಇದಕ್ಕೂ ಮುನ್ನ ನಡೆದ ಸಭೆಯಲ್ಲಿ ಜಲ ಸಂಪನ್ಮೂಲಕ ಸಚಿವ ಎಂ.ಬಿ. ಪಾಟೀಲ್, ಕೃಷಿ ಸಚಿವ ಕೃಷ್ಣ ಬೈರೇಗೌಡ, ಮಂಡ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಆಗಿರುವ ವಸತಿ ಸಚಿವ ಕೃಷ್ಣಪ್ಪ, ಮಂಡ್ಯ ಸಂಸದ ಪುಟ್ಟರಾಜು, ಮಾಜಿ ಸಚಿವ ಅಂಬರೀಶ್, ಶಾಸಕರಾದ ನರೇಂದ್ರ ಸ್ವಾಮಿ, ಚಲುವರಾಯ ಸ್ವಾಮಿ, ಮರಿತಿಬ್ಬೇಗೌಡ, ಶ್ರೀಕಂಠೇಗೌಡ, ಪ್ರಟ್ಟಣ್ಣಯ್ಯ, ರಮೇಶ್ ಬಂಡಿಸಿದ್ದೇಗೌಡ, ನಾರಾಯಣಗೌಡ ಉಪಸ್ಥಿತರಿದ್ದರು.

47/47

## ಅಹಮದ್ ಪಟೇಲ್‌ರನ್ನು ಅಭಿನಂದಿಸಿದ ಸಿಎಂ

**ಬೆಂಗಳೂರು, ಆಗಸ್ಟ್ 9 (ಕರ್ನಾಟಕ ವಾರ್ತೆ)**

ಗುಜರಾತ್ ವಿಧಾನಸಭೆಯಿಚಿದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಅಹಮದ್ ಪಟೇಲ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸಿದ್ದಾರೆ.

ಅಹಮದ್ ಪಟೇಲ್ ಅವರನ್ನು ಸೋಲಿಸಲು ಬಿಜೆಪಿಯವರು ಹರ ಸಾಹಸ ಮಾಡಿದರು. ಕುದುರೆ ವ್ಯಾಪಾರವನ್ನೂ ಅರಂಭಿಸಿದ್ದರು. 15-20 ಕೋಟಿಯ ಆಮಿಷ ಒಡ್ಡಿ ಶಾಸಕರನ್ನು ಖರೀದಿಸುವ ಪ್ರಯತ್ನಕ್ಕೂ ಬಿಜೆಪಿಯವರು ಕೈ ಹಾಕಿದ್ದರು ಎಂದು ಸಿಎಂ ಹೇಳಿದರು.

ಆದರೆ ನಮ್ಮ ಶಾಸಕರು ಬಿಜೆಪಿಯ ಯಾವುದೇ ಆಮಿಷಕ್ಕೆ ಒಳಗಾಗದೆ ಅಹಮದ್ ಪಟೇಲ್ ಅವರಿಗೆ ಮತ ಹಾಕಿದ್ದಾರೆ. ಅವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.